**<u>ಸುಳ್ಯದ ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ . ದಂ. ರವರ ನ್ಯಾಯಾಲಯದಲ್ಲಿ</u>**

ಸಿ.ಸಿ.ಸಂಖ್ಯೆ : 3/2022
ಪಿ.ಡಬ್ಲೂ: 1
ಸಿ.ಡಬ್ಲೂ: 1

ಸಾಕ್ಷಿದಾರರ ಹೆಸರು : ಕಮಲಾ
ತಂದೆ: ಗಂಡನ ಹೆಸರು : ರಾಮಚಂದ್ರ
ಪ್ರಾಯ : 60 ವರ್ಷ
ಕೆಲಸ : ಮನೆ ಕೆಲಸ
ವಾಸ ಸ್ಥಳ : ಮರ್ಕಂಜ

**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಗಿದೆ ದಿನಾಂಕ 01.06.2022</u>**

**<u>ಮುಖ್ಯ ವಿಚಾರಣೆ ಶ್ರೀ ಸ.ಸ.ಅ. ರವರಿಂದ:-</u>**

ನನಗೆ ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು. ಗೈರು ಹಾಜರಿರುವ ಆರೋಪಿತರನ್ನು ಗುರುತಿಸುವಲ್ಲಿ ಯಾವುದೇ ತಕರಾರು ಇಲ್ಲವೆಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ. 2007-08 ಸಾಲಿನಲ್ಲಿ ಮರ್ಕಂಜ ಗ್ರಾಮ ಪಂಚಾಯಿತಿನಲ್ಲಿ ಇಂದಿರಾ ಅವಾಸ್ ಯೋಜನೆಯ ಅಡಿಯಲ್ಲಿ ಮನೆ ಕಟ್ಟುವ ಸಲುವಾಗಿ ಧನ ಸಹಾಯಕಾಗಿ  ಅರ್ಜಿ ಸಲ್ಲಿಸಿದ್ದು  ನನ್ನ ಸಹಿಗಳನ್ನು ದಾಖಲೆಗಳ ಮೇಲೆ 3 ನೇ ಆರೋಪಿ ಪಡೆದುಕೊಂಡಿರುತ್ತಾರೆ. ಮಂಜೂರಾದ ಹಣವನ್ನು ನನಗೆ ನೀಡದ ಮೋಸ ಮತ್ತು ವಂಚನೆ ಮಾಡಿ ಸರಕಾರಕ್ಕೆ ಮೋಸ ಮಾಡಿರುತ್ತಾರೆ. ಆ ಸಮಯದಲ್ಲಿ  1 ನೇ ಆರೋಪಿಯು ಮರ್ಕಂಜಾ ಗ್ರಾಮ ಪಂಚಾಯಿತಿಯ ಅಧಕ್ಷರಾಗಿದ್ದರು.  ಈ ಕುರಿತು ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೆನೆ.

**1 ನೇ ಆರೋಪಿಯ ಪರ ವಕೀಲರಾದ ಎನ್.ಕೆ. ರವರಿಂದ ಪಾಟೀ ಸವಾಲು:** ನನಗೆ ಸಹಿ ಮಾಡಲು ಬರುತ್ತದೆ. ನನಗೆ ಮನೆ ಇದೆ. ಆದರೆ ಧನ ಸಹಾಯವನ್ನು ಪಡೆಯಲು ಅರ್ಜಿ ಸಲ್ಲಿಸಿದ್ದೆ. ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ.  ನ್ಯಾಯಾಲಯದಿಂದ ಸಮನ್ಸ್ ಬಂದಿದ್ದರಿಂದ ನ್ಯಾಯಾಲಯಕ್ಕೆ ಬಂದಿರುತ್ತೆನೆ. ಪಂಚಾಯಿತಿಯಿಂದ ಹಣ ಪಡೆದುಕೊಂಡು ಮನೆ ಕಟ್ಟಿರುತ್ತೆನೆಂದರೆ ಸರಿಯಲ್ಲ. ನನಗೆ ಹಣ ಸಿಕ್ಕಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.  ಈ ಪ್ರಕರಣ ನಡೆದಾಗ 1 ನೇ ಆರೋಪಿಯು ಅಧಕ್ಷನಾಗಿರಲಿಲ್ಲವೆಂದರೆ ಸರಿಯಲ್ಲ. ನಮ್ಮ ಊರಿನಲ್ಲಿರುವ ಶಂಕರನಾರಾಯಣ ಶಾಸ್ತ್ರಿ ರವರ ಪರಿಚಯವಿದೆ. ಅವರು ನನಗೆ ಮಂಜೂರಾತಿ ಹಣ ಬಂದಿಲ್ಲವೆಂದು

ತಿಳಿಸಿದರು. ಸದರಿ ಶಾಸ್ತ್ರಿ ರವರು ಹಣ ಬರಲಿಲ್ಲವೆಂದು ಹೇಳಿದ್ದಾರೋ ಇಲ್ಲವೋ ನನಗೆ ಈಗ ನೆನಪು ಬರುತ್ತಿಲ್ಲ.

**2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

ಮರು ವಿಚಾರಣೆಃ ಇಲ್ಲ.

ತೆ.ನ್ಯಾ.ಸಾ.ಹೇ. ನನ್ನ ಉ.ಬೆ. ಮಾಡಲಾಯಿತು.

ಓ.ಹೇ.ಕೇ.ಸ. ಇದೆ ಎಂದು ಒಪ್ಪಿರುತ್ತಾರೆ

ಹಿ.ಪ್ರ.ದ.ನ್ಯಾ. ದಂ. ಸುಳ್ಯ